**DAA/DCA/DSA 010**

## ಪ್ರಥಮ ಬಿ.ಎ / ಬಿ.ಕಾಂ / ಬಿ.ಎಸ್ಸಿ., ಪದವಿ ಪರೀಕ್ಷೆ

## ಆಗಸ್ಟ್ / ಸೆಪ್ಟಂಬರ್ 2011

## ಅಂಚೆ ಮತ್ತು ತೆರಪಿನ ಶಿಕ್ಷಣ

### ಕನ್ನಡ ಭಾಷಾ ಪತ್ರಿಕೆ – ೧

### ಹೊಸಗನ್ನಡ ಕವಿತೆಗಳು ಶೂದ್ರತಪಸ್ವಿ, ಬೆಟ್ಟದ ಜೀವ, ಆಡಳಿತ ಕನ್ನಡ

*ಸಮಯ: 3 ಗಂಟೆಗಳು]* *[ಅಂಕಗಳು : 80*

**1.** ಅ) ಒಂದರ ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. **04**

೧) ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀಶೀ ದೇಹಾ
ಸ್ಪರ್ಶಾ – ಪಡೆದೀಶೀ ದೇಹಾ
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ – ದೀ ಮನಸಿನ ಗೇಹಾ

೨) ಪೋದ ಜನ್ಮಗಳಾವ ದುಷ್ಕೃತ್ಯವೊ? ಅಲ್ಲದಿರೆ
ಬಾಳ್ದುದಿಗೆ ನಾಂ ಪಡೆದೊರ್ವನೆಯೆ ಮಗನ್
ಕಣ್ಣೆದುರೆ ಮಡಿವುದನ್ ಕಾಣ್ಬರೊಳರೇ
ಈ ಪುಣ್ಯಯುಗದೊಳ್
ಅಪ್ರಾಪ್ತ ಯೌವನನ್

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. **04**

ದಾಹ, ಶೋಣಿತ, ಕೂರ್ಮ, ಸಮರ, ಬಾಂದಳ, ನಳಿಗೆ, ಕಜ್ಜ, ಪೂಣ್ಕೆ, ಬಿಜ್ಜೆ, ಎಲರು, ವಿಪಿನ, ಜವನಿಕೆ

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. **04**

ವೃಕ್ಷಭೈರವ, ಕುರುಬಗೌಡ, ರಾಜರತ್ನಂ.

**2.** ನಾಲ್ಕಕ್ಕೆ ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ: 4 x 3 = 12

೧) ಕನಸೊಡೆದೆದ್ದೆ ! ಇನ್ನೆಲ್ಲಿಯ ನಿದ್ದೆ?
೨) ಕೋದಂಡ ದಂಡವೊ ಹೀಗೆ ದಂಡ
೩) ಹಗಲ ಸತತೋದ್ಯೋಗಿ ಇರುಳ ಕಿಂದರ ಜೋಗಿ
೪) ಮಹರ್ಷಿ ಶಂಬೂಕ ದೇವನಾಣೆ, ಕಲ್ಲವೊಲ್ ನಿಲ್‌ನೀನ್
೫) ನೀನ್ ವಿಚಾರಿಸಲ್ ದುಃಖವೆಂಬುದುಂಟೆ?
೬) ಮುದಿತನಕ್ಕೊಂದೊರೆಗೋಲಾಗಿರ್ದ ನೀನ್ :

3. 'ಬೆಳೆಯುವ ಪೈರು ಭಾದ್ರಪದದೊಳೆ ಸುಟ್ಟು ಹೋದ ಬಗೆ' 'ಮದಲಿಂಗನ ಕಣಿವೆ' ಕವನದಲ್ಲಿ ಹೇಗೆ ಚಿತ್ರಿತವಾಗಿದೆ? **08 ಅಂಕಗಳು**

ಅಥವಾ

ನಗರ ಜೀವನದ ಅನಾಥ ಪ್ರಜ್ಞೆ 'ಮುಂಬೈ ಜಾತಕ' ಕವನದಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿ

*ಮುಂದುವರೆದಿದೆ. . . . . . .2*

63

4. 'ಶೂದ್ರ ತಪಸ್ವಿ' ನಾಟಕದ ಶೀರ್ಷಿಕೆಯ ಔಚಿತ್ಯವನ್ನು ವಿವರಿಸಿ. **08 ಅಂಕಗಳು**

**ಅಥವಾ**

ವಿವೇಕ, ತಾಳ್ಮೆ, ಗಾಂಭೀರ್ಯದ ಪ್ರತಿರೂಪವಾಗಿ 'ಶ್ರೀರಾಮ'ನ ಪಾತ್ರ ಮೂಡಿ ಬಂದ ಬಗೆಯನ್ನು ಚಿತ್ರಿಸಿ.

5. 1. ಗೋಪಾಲಯ್ಯ ಮತ್ತು ಶಂಕರಮ್ಮನ ದಾಂಪತ್ಯ ಜೀವನದ ಸೊಗಸನ್ನು ವಿವರಿಸಿ. **10 ಅಂಕಗಳು**

**ಅಥವಾ**

ಗೋಪಾಲಯ್ಯನವರ ಜೀವನ ದರ್ಶನವನ್ನು ಪರಿಚಯಿಸಿ.

2. ಗೋಪಾಲಯ್ಯನವರಿಂದ ರೂಪಗೊಂಡ ನಾರಾಯಣ ಹಾಗೂ ಲಕ್ಷ್ಮಿಯ ಬದುಕನ್ನು ಚಿತ್ರಿಸಿ. **10 ಅಂಕಗಳು**

**ಅಥವಾ**

ಶಿವರಾಮಯ್ಯ, ದೇರಣ್ಣ, ಬಟ್ಯ – ಇವರಲ್ಲಿ ಇಬ್ಬರನ್ನು ಪರಿಚಯಿಸಿ.

6. ಅ) 'ಜ್ಞಾಪನ ಪತ್ರ' ಎಂದರೇನು? **02 ಅಂಕಗಳು**

ಆ) 'ಅರೆ ಸರ್ಕಾರಿ ಪತ್ರ'ಎಂದರೇನು? ಮಾದರಿ ಪತ್ರವೊಂದನ್ನು ರಚಿಸಿ. **04 ಅಂಕಗಳು**

ಇ) 'ಅರ್ಜಿ' ಎಂದರೇನು? ಮುಂಗಡ ವೇತನವನ್ನು ಕೋರಿ ಮೇಲಾಧಿಕಾರಿಗಳಿಗೆ ಒಂದು ಅರ್ಜಿ ಬರೆಯಿರಿ. **04 ಅಂಕಗಳು**

**7. ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ: (80 ಅಂಕಗಳ ಸ್ಕೀಮ್‌ನವರಿಗಾಗಿ ಕಡ್ಡಾಯ ಪ್ರಶ್ನೆ) 10 ಅಂಕಗಳು**

1. ಸುತ್ತೋಲೆ ಅಂದರೇನು? ಪತ್ರ ವ್ಯವಹಾರದ ವಿಧಾನಗಳಾವುವು?

**ಅಥವಾ**

2. ನಿಮ್ಮ ಸಂಸ್ಥೆಯಲ್ಲಿ ಆಚರಿಸ ಬೇಕಾದ 'ರಾಜ್ಯೋತ್ಸವ' ಆಚರಣೆಗೆ ಸಂಬಂಧಿಸಿದಂತೆ 'ಆಹ್ವಾನ ಪತ್ರಿಕೆ' ಸಿದ್ಧಪಡಿಸಿ.

* * * * * *